ಶ್ರೀ ಎಂ. ಗಂಗಣ್ಣ.—ಹುಸೇನಿ ಆಲಂದಗರ್ಗಾ, ಮುದಗಲ್ಲ್ ಇದಕ್ಕೆ ಸಂಬಂಧಪಟ್ಟಂತೆ ೧೯೭೫-೭೬ ರಿಂದ ೧೯೭೫-೭೬ರವರೆಗೆ ನಜರಾನ ಏನೂ ಬಂದಿಲ್ಲವೆಂದು ಹೇಳುತ್ತಿರುವುದು ತಪ್ಪು ಲೆಕ್ಕ ವಿರುತ್ತದೆಂದು ಹೇಳುತ್ತೇನೆ.

ಶ್ರೀ ಆಜೀಜ್ ಸೇಟ್.—ನನ್ನಲ್ಲಿರುವ ಲೆಕ್ಕದ ಪ್ರಕಾರ ೧೯೭೬-೭೭ರಲ್ಲಿ ೧೯೭೭-೭೮ರಿಂದ ಮತ್ತು ೧೯೭೫-೭೬ರಲ್ಲಿ ನಜರಾನ ಬಂದಿಲ್ಲವೆಂದು ಲೆಕ್ಕದಲ್ಲಿ ಇರುತ್ತದೆ. ತಮಗೆ ಏನೂ ಮಾಹಿತಿ ಬೇಕಾಗಿರುತ್ತದೆಂಬುದನ್ನು ಕೇಳಿದರೆ ಸರಿಯಾದ ಮಾಹಿತಿಯನ್ನು ಕೊಡುತ್ತೇನೆಂದು ಹೇಳುತ್ತೇನೆ.

ಶ್ರೀ ಎಂ. ಗಂಗಣ್ಣ.—ಮೂರು ವರ್ಷಗಳಿಂದಲೂ ನಜರಾನ ವಕ್ಫ್ ಬೋರ್ಡ್‌ಗೆ ನಜರಾನ ಬರುತ್ತಿಲ್ಲವೆಂದು ತೋರಿಸಿರುತ್ತೀರಿ. ಆದರೆ ೧೯೭೫-೭೬ರಲ್ಲಿ ಆ ಕಮಿಟಿಯ ಮೆಂಬರ್ ಆಗಿ ಇದ್ದು ೧೧ ಸಾವಿರ ರೂಪಾಯಿ ಕಲೆಕ್ಟ್ ಮಾಡಿಕೊಟ್ಟಿರುತ್ತೇವೆ.

ಶ್ರೀ ಆಜೀಜ್ ಸೇಟ್.—ಈ ವಿಷಯವನ್ನು ಎನ್‌ಕ್ವೈರಿ ಮಾಡುತ್ತೇವೆ. ಮತ್ತು ಒಬ್ಬ ಕಂಟ್ರಾಕ್ಟರ್ ತೆಗೆದುಕೊಂಡಿರುವುದಕ್ಕೆ ೭,೫೦೦ ರೂಪಾಯಿಗಳ ಲೆಕ್ಕವನ್ನು ಕೊಡಬೇಕಾಗಿರುತ್ತದೆ. ಆದ್ದರಿಂದ ಅವರ ಮೇಲೆ ಸೂಕ್ತ ಕ್ರಮವನ್ನು ಕೂಡ ತೆಗೆದುಕೊಳ್ಳಬೇಕೆಂದಿರುತ್ತೇವೆ.

ಶ್ರೀ ಎಂ. ಗಂಗಣ್ಣ.—ಸ್ವಾಮಿ ಬೋರ್ಡಿನಿಂದ ಒಂದು ಪೈಸೆ ಕೂಡ ಸಹಾಯದನ ಸಿಗುತ್ತಿಲ್ಲ. ಕುಷ್ಟಗಿ ಕ್ಷೇತ್ರದಲ್ಲಿ ಸುಮಾರು ೮ ಸಾವಿರ ಜನ ಮುಸ್ಲಿಮರು, ಪಾಪ್ಯುಲೇಷನ್ ಇರತಕ್ಕಂಥ ಸಳ ವಾಗಿರುತ್ತದೆ. ಇದನ್ನು ಸ್ಟೇಟ್ ಬೋರ್ಡ್‌ನಿಂದ ಅಟಾಚ್‌ಮೆಂಟ್ ಬಾಡಿಯಾಗಿ ಏತಕ್ಕೆ ಕೊಡಬಾರದೆಂದು ಕೇಳುತ್ತೇನೆ.

ಶ್ರೀ ಆಜೀಜ್ ಸೇಟ್.—ಮುಸಲ್ಮಾನ ಜನಾಂಗದವರು ಇರುತ್ತಾರೆಂದು ಕೇಳಿರುತ್ತೇನೆ. ಈ ಒಂದು ಸಂಸ್ಥೆಯಲ್ಲಿ ಖರ್ಚು ಕಡಿಮೆ ಮಾಡಿ ಹಣವನ್ನು ಉಳಿತಾಯ ಮಾಡಲಿಕ್ಕೆ ಸಾಧ್ಯವಿರುತ್ತದೆ. ಹುಸೇನಿ ಆಲಂದಗರ್ಗದವರು ಸ್ಟೇಟ್ ವಕ್ಫ್ ಬೋರ್ಡಿನಿಂದ ದನಸಹಾಯವನ್ನು ಕೇಳಲಿಲ್ಲ. ಡೆವಲಪ್ ಮೆಂಟ್‌ಗಾಗಿ ಕೇಳಿದರೆ ಸರ್ಕಾರದವರು ಹಣವನ್ನು ಕೊಡಲು ಪ್ರಯತ್ನ ಮಾಡುತ್ತೇವೆ. ಇಷ್ಟು ರಲ್ಲಿ ರಾಯಚೂರು, ಗುಲ್ಬರ್ಗಾ ಕಡೆ ಟೂರ್‌ಬರುವವನಿದ್ದೇನೆ. ಆಗ ಇನ್‌ಸ್ಪೆಕ್ಷ್ ಮಾಡಿ ಸಲಹೆ ಮಾಡೋಣವೆಂದು ಹೇಳುತ್ತೇನೆ.

ಶ್ರೀ ಎಂ. ಗಂಗಣ್ಣ.—೧೯೫೨-೫೩ರಲ್ಲಿ ಹುಸೇನಿ ಆಲಂದರ್ಗ ರೈಲ್ವೆ ಬೋರ್ಡ್‌ಗೆ ಸೇರಿಕೊಂಡಿದ್ದಾಗ ಒಂದು ಲಕ್ಷ ಚಿಲ್ಲರೆ ಹಣ ಅವರಿಗೆ ಸಂದಾಯವಾಗುತ್ತದೆ. ಆ ಹಣವನ್ನು ವಾಪಸ್ ನಮಗೆ ಕೊಡಿಸಿದರೆ ಪುಣ್ಯ ಬರುತ್ತದೆಂದು ಹೇಳುತ್ತೇನೆ.

ಶ್ರೀ ಆಜೀಜ್‌ಸೇಟ್.—ಇನ್‌ಸ್ಪಿಟ್ಯೂಷನ್ ದುಡ್ಡೇನಾದರೂ ಬೋರ್ಡ್‌ನಲ್ಲಿ ಇದ್ದರೆ ಅದನ್ನು ವಿಚಾರ ಮಾಡುತ್ತೇನೆ.

SC/ST students arrested in Bidar District

346. SRI S. S. ARAKERI (Balloli).—Will the Chief Minister be pleased to state :—

(a) the total No. of High Schools and College Students belonging to S. C. and S.T.s. arrested in Bidar District during the last six months ;

(b) the date of their arrest ;

(c) the reasons for their arrest ;

(d) the dates when they were released ?

SRI D. DEVARAJ URS.— (Chief Minister.)

(a) 92

(b) The dates of arrest are as follows :

(1) 31-7-78—3 SCs students in Cr. No.56/78.

(2) 8-8-1978—6 SC students in Cr. No.81/78

(3) 5-9-1978—81 SC students in Cr. No. 74, 75, 76, 77 and 78/78.

(4) 17-8-1978—1 SC student in Cr. No. 106/68

(5) 29-11-1978—1 SC student in Cr. No. 101/78.

(c)—

(1) Due to disturbances which arose on account of the decision to change the name of Marathavada University (at Maharashtra State).

(2) Due to causing of obstruction in fetching water from well.

(3) Due to attempting to outrage the modest of ladies and pelting of stones at the houses of Villagers resulting in damage etc.

(d)—

(1) 3 SC students in Cr. No.56/78 were released on bail on same day of arrest *viz.*, 31-7-1978.

(2) 6 SC students arrested on 8-8-78 were releaced on bail on same day of arrest.

(3) 81 SC students arrested on 5-9-1978 were remanded to judicial custody on same day. Out of them, 4 were released by the Court on 22-11-1978, 59 were released on 30-11-1978, 8 were released on 1-12-1978; 1 was released on 2-12-1978; and 8 were released on 4-12-1978.

(4) 1 SC student arrested on 17-9-1978 in Cr. No- 106/78 is still in judicial custody.

(5) 1 SC student was arrested in Cr. No. 101/78, on 29th November 1978 and was released on the same day.

ಶ್ರೀ ಎಸ್. ಎಸ್. ಆರಕೇರಿ.—ಕಳೆದ ಆರು ತಿಂಗಳುಗಳಲ್ಲಿ ಬೀದರ್ ಜಿಲ್ಲೆಯಲ್ಲಿ ಒಟ್ಟು ಜನ ವಿದ್ಯಾರ್ಥಿಗಳನ್ನು ದಸ್ತಗಿರಿ ಮಾಡಿದ್ದೀರಿ ಎಂದು ಕೇಳಿದ್ದಕ್ಕೆ ೯೨ ಜನ ಹರಿಜನ ಗಿರಿಜನ ವಿದ್ಯಾರ್ಥಿಗಳನ್ನು ದಸ್ತಗಿರಿ ಮಾಡಿದ್ದೇವೆಂದು ಹೇಳಿದ್ದೀರಿ. ಕರ್ನಾಟಕದಲ್ಲಿ ಅಲ್ಲ, ಭಾರತದ ಯಾವುದೇ ಭಾಗದಲ್ಲಿ ವಿದ್ಯಾರ್ಥಿಗಳು ತಮ್ಮ ಬೇಡಿಕೆಗಳಿಗಾಗಿ ಚಳುವಳಿಯನ್ನು ಮಾಡುವುದು ಇರುತ್ತದೆ. ಒಟ್ಟಾರೆ ಚಳುವಳಿಯನ್ನು ಮಾಡಿದಂಥ ೯೨ ಜನ ವಿದ್ಯಾರ್ಥಿಗಳನ್ನು ದಸ್ತಗಿರಿ ಮಾಡಲು ಮುಖ್ಯವಾದ ಬೇಡಿಕೆಗಳು ಏನು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಅದರಲ್ಲಿ ಯಾವ ಬೇಡಿಕೆಯು ಇಲ್ಲ.

ಶ್ರೀ ಎಸ್ ಎಸ್. ಆರಕೇರಿ.—ತಾವು ಕಾರಣಗಳನ್ನು ಕೊಟ್ಟಿದ್ದೀರಿ. ಷೆಡ್ಯೂಲ್ ಕ್ಯಾಸ್ಟ್, ಮತ್ತು ಷೆಡ್ಯೂಲ್ ಟ್ರೈಬ್ಸ್ ೯೨ ಜನ ವಿದ್ಯಾರ್ಥಿಗಳನ್ನು ಅರೆಸ್ಟ್ ಮಾಡಿರುವವರು ಏನು ಇರುತ್ತಾರೆ ಇವರು ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ಓದುತ್ತಿರುವ ಚಿಕ್ಕ ವಯಸ್ಸಿನವರು ಇರುತ್ತಾರೆ.

ಇವರುಗಳನ್ನು ಅರೆಸ್ಟ್ ಮಾಡಿ ಪೋಲೀಸ್‌ನವರು ಕಿರುಕುಳ ಕೊಡುತ್ತಿದ್ದಾರೆಂದು ತಿಳಿದುಬಂದಿದೆ. ಅವರಿಗೆ ಏನಾದರೂ ವಾರ್ನಿಂಗ್ ಕೊಡುವುದಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.—ತುಂಟತನ ಮಾಡುವುದು ಚೇಷ್ಟೆಯಲ್ಲಿ ತೊಡಗುವುದು ಸಾರ್ವಜನಿಕರಿಗೆ ಮಾನಭಂಗ ಮಾಡುವುದು ಆಸ್ತಿಪಾಸ್ತಿಗೆ ನಷ್ಟವನ್ನು ಮಾಡುತ್ತಿದ್ದರೆ ಹರಿಜನರು ಎಂದು ಬಿಟ್ಟುಬಿಡುವುದಕ್ಕೆ ಆಗುತ್ತದೆಯೇ ? ಕಾನೂನು ಎಂದರೆ ಹರಿಜನರಿಗೂ ಒಂದೇ ಎಲ್ಲರಿಗೂ ಒಂದೇ.

ಶ್ರೀ ಎಸ್. ಎಸ್. ಆರಕೇರಿ.—ನನ್ನ ಗಮನಕ್ಕೆ ಬಂದ ಪ್ರಕಾರ ನೀವು ಏನು ಕಾರಣ ಕೊಟ್ಟಿದ್ದೀರಿ, ನೀರನ್ನು ತೆಗೆದುಕೊಳ್ಳಲು ಮತ್ತು ಮಹಿಳೆಯರಿಗೆ ಮಾನಭಂಗ ಮಾಡುವುದಕ್ಕೆ ವಿದ್ಯಾರ್ಥಿಗಳು ಪ್ರಯತ್ನ ಮಾಡಿದ್ದಾರೆಂದು. ಆದರೆ ನನ್ನ ಗಮನಕ್ಕೆ ಬಂದ ಪ್ರಕಾರ ಅವರು ಇಂಥ ಯಾವುದೇ ಕೃತ್ಯಗಳನ್ನು ಮಾಡಿಲ್ಲ. ಪೋಲೀಸ್‌ನವರು ಕಿರುಕುಳ ಕೊಡುತ್ತಿರುವುದನ್ನು, ವಿದ್ಯಾರ್ಥಿಗಳು ಸಹಿಸಲು ಸಾಧ್ಯವಾಗುತ್ತಿಲ್ಲವೆಂದು ತಿಳಿದುಬಂದಿರುತ್ತದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳನ್ನು ಅವರುಗಳಿಗೆ ಕ್ಷಮೆಯನ್ನು ಕೊಡಲು ತಾವು ಡೈರೆಕ್ಷನ್ ಕೊಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.—ಅಧಿಕಾರಿಗಳು ಮೊಕದಮೆ ಹೂಡಿದ್ದಾರೆ.ಅವರು ಏನು ತಪ್ಪು ಮಾಡಿಲ್ಲವೆಂದು ಕೋರ್ಟಿನಲ್ಲಿತೀರ್ಮಾನವಾದರೆ ಬಿಟ್ಟುಬಿಡುತ್ತಾರೆ. ಒಂದು ವೇಳೆ ಅವರು ತಪ್ಪು ಮಾಡಿದ್ದಾರೆಂದರೆ ಪೋಲೀಸ್‌ನವರು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಕಾನೂನು ಪ್ರಕಾರ ಕ್ರಮ ತೆಗದುಕೊಳ್ಳದಿದ್ದರೆ ಸಾರ್ವಜನಿಕರ ಮೇಲೆ ಏನು ಪರಿಣಾಮವಾಗುತ್ತದೆ ಎನ್ನುವುದನ್ನು ನೀವೇ ಹೇಳಿ ? ಅವರು ಒಬ್ಬ ಹೆಂಗಸನ್ನು ಹಿಡಿದುಕೊಂಡು ಮಾನ ಭಂಗ ಮಾಡುವುದಕ್ಕೆ ಹೊರಟು ಹೋಗಿದ್ದಾರೆ. ಒಂದು ಊರಿನಲ್ಲಿ ಮನೆಯ ಮೇಲೆ ಕಲ್ಲುಗಳನ್ನು ಹೊಡೆದಿದ್ದಾರೆ. About 100 students of Ambedkar Hostel Bhalki, belonging to Dalit Panthur went to Kudavanpur shouting slogans. ಸ್ಲೋಗನ್ ಶುರು ಮಾಡಿದ್ದಾರೆ. ಏನೇನೋ ಹೇಳಿದ್ದಾರೆ. ಅದನ್ನು ಹೇಳುವುದು ಬೇಡ. ಮುರ್ದಾ ಬಾದ್ ಜಿಂದಾ ಬಾದ್. ಬೇಡವಾದವರಿಗೆ ಮುರ್ದಾ ಬಾದ್, ಬೇಕಾದವರಿಗೆ ಜಿಂದಾ ಬಾದ್ ಎಂಬುದಾಗಿ ಸ್ಲೋಗನ್ ಕೂಗಿದ್ದಾರೆ. ಮತ್ತು ಅವರು ಹೋಗಿರುವ ರೀತ್ಯ ಕೂಡ ದೊಣ್ಣೆಕಲ್ಲುಗಳನ್ನು ತೆಗೆದುಕೊಂಡು ಹೊರಟು ಹೋಗಿದ್ದಾರೆ. ಅಲ್ಲಿ ಏನು ಮಾಡಿದ್ದಾರೆಂದರೆ ಒಂದು ಮನೆಗೆ ನುಗ್ಗಿಬಿಟ್ಟು ಮನೆಯಲ್ಲಿದ್ದಂತಹ ಪೋಟೋಗಳನ್ನು ಒಡೆದು ಹಾಕಿದ್ದಾರೆ. ಮತ್ತೊಂದು ಮನೆಗೆ ಹೋಗಿ ಅಲ್ಲಿ ಸ್ವಲ್ಪ ಹಣ ಹಾಗೂ ಒಡವೆಗಳನ್ನು ಎತ್ತಿಕೊಂಡು ಬಂದು ಬಿಟ್ಟಿದ್ದಾರೆ. ಇದೂ ಅಲ್ಲದೆ ಒಬ್ಬ ಹೆಂಗಸನ್ನು ಮಾನ ಭಂಗ ಮಾಡುವುದಕ್ಕೆ ಹೋಗಿದ್ದಾರೆ. ಇದಕ್ಕೆಲ್ಲಾ ಕಾರಣರು ಯಾರು ಎಂದರೆ ಇನ್ನೊಂದು ಊರಿನಲ್ಲಿ ಒಬ್ಬ ಹರಿಜನ ಲೇಡಿ ಚುನಾವಣೆಗೆ ನಿಂತು ಸೋತು ಬಿಟ್ಟಿದ್ದಾರೆ. ಅವರು ವಿದ್ಯಾರ್ಥಿಗಳನ್ನು ಉಪಯೋಗ ಮಾಡಿಕೊಂಡು ಗಲಾಟೆ ಮಾಡಿದ್ದಾರೆ. ಆ ರೀತಿ ಗಲಾಟೆ ಮಾಡಿದ್ದವರೆಲ್ಲರನ್ನೂ ಹಿಡಿದುಕೊಂಡು ಬಂದಿದ್ದಾರೆ. ಕೆಲವರ ಮೇಲೆ ಕೇಸ್ ಹಾಕಿದೆ, ಕೆಲವರ ಮೇಲೆ ಚಾರ್ಜ್ ಶೀಟ್ ಹಾಕಿದ್ದಾರೆ. ಕೆಲವರನ್ನು ಬಿಟ್ಟು ಬಿಟ್ಟಿದ್ದಾರೆ. ದೀನದಲಿತರ ಪಾರ್ಟಿ ಎನ್ನುವ ಹೆಸರಿನಲ್ಲಿ ಅವರೇ ಕಾನೂನನ್ನು ಮುರಿಯುವುದಕ್ಕೆ ಹೋಗುವುದಾದರೆ ಅದು ತಪ್ಪಾಗುತ್ತದೆ. ಅದನ್ನು ತಾವು ಒಪ್ಪುತ್ತೀರೆಂದು ನನ್ನ ಭಾವನೆ. ಅವರದ್ದು ಯಾವುದಾದರೂ ನ್ಯಾಯವಾದ ಬೇಡಿಕೆಗಳಿದ್ದರೆ ನಮ್ಮ ಸರ್ಕಾರ ಯಾವತ್ತೂ ಕಡೆಗಣಿಸಿಲ್ಲ. ಅಂತಹುಗಳ ಬಗ್ಗೆ ವಿಶೇಷ ಗಮನ ಕೊಟ್ಟು ನೋಡುತ್ತದೆ. ಅವರು ನಮ್ಮ ಮುಂದೆ ಇದುವರೆಗೂ ಏನು ಬಂದಿಲ್ಲ. ಇದರಲ್ಲಿ ಇನ್ನೂ ಯಾರ್ಯಾರೋ ಇನ್ವಾಲ್ ಆಗಿದ್ದಾರೆ. ಕೇಸನ್ನು ವಾಪಸ್ಸು ತೆಗೆಯಬೇಕೆ, ಬಿಡಬೇಕೇ ಆ ಪ್ರಶ್ನೆ ಬೇರೆ. ಅವರು ಸರ್ಕಾರದ ಮುಂದೆ ಬರಲಿ. ಮತ್ತೆ ಅವರಿಗೂ ಕೂಡ ನಾವು ತಪ್ಪು ಮಾಡಿದ್ದೇವೆ ಎನ್ನುವ ಭಾವನೆ ಮೊದಲು ಬರಲಿ. ಈ ರೀತಿ ಹೋದರೆ ಪ್ರಯೋಜನವಿಲ್ಲ ಕಾನೂನಿನ ದೃಷ್ಟಿಯಿಂದ ಎಲ್ಲರನ್ನೂ ಒಂದೇ ರೀತಿಯಲ್ಲಿ ನೋಡಬೇಕಾಗುತ್ತದೆ. ಯಾವುದೋ ವಿಷಯವನ್ನು ತೆಗೆದುಕೊಂಡು ಬೇರೆಯವರ ಮನೆಯ ಮೇಲೆ ಕಲ್ಲು ಹೊಡೆಯುವುದು, ಮತ್ತೆ ಹೆಂಗಸರ ಮಾನ ಭಂಗ ಮಾಡುವುದಕ್ಕೆ ಹೋದರೆ ಅದಕ್ಕೆ ನಾವು ಜವಾಬ್ದಾರರಾಗಿ ನಿಮ್ಮನ್ನು ಬಿಡಿಸುವುದಕ್ಕಾಗುವುದಿಲ್ಲ ಎಂಬುದಾಗಿ ಅವರಿಗೆ ನೀವು ಸ್ವಲ್ಪ ಹೇಳಿ. ಅವರು ಸರ್ಕಾರದ ಮುಂದೆ ಬರಲಿ. We will consider sympathetically.

MR. SPEAKER —Now questions are over.